



ನಾಗಮಂಗಲ ತಾಲ್ಲೂಕಿನ ಬೆಳ್ಳೂರು ಹೋಬಳಿ ಬೀಚನಹಳ್ಳಿ ನಮ್ಮೂರು. ಎರಡು ವರ್ಷ ಹಾಸ್ಟೆಲ್‌ನಲ್ಲಿ ಇದ್ದು ಓದಿದೆ. ಕಾಲೇಜಿನಲ್ಲಿ ಅಭ್ಯಾಸ ಪರೀಕ್ಷೆಗಳನ್ನು ಮಾಡುತ್ತಿದ್ದರು. ಹಾಸ್ಟೆಲ್‌ನಲ್ಲಿಯೂ ಓದಿಗೆ ನಿಗದಿತ ವೇಳಾಪಟ್ಟಿ ಇತ್ತು. ಅದನ್ನು ತಪ್ಪದೆ ಪಾಲಿಸುತ್ತಿದ್ದೆ. ಕಾಲೇಜಿನಲ್ಲಿ ಅಧ್ಯಾಪಕರು ಕೊಟ್ಟ ನೋಟ್ಸ್ ಮತ್ತು ಪಠ್ಯವನ್ನು ಬಿಟ್ಟು ಬೇರೆ ಇನ್ನೇನೂ ತಲೆ ಕೆಡಿಸಿಕೊಳ್ಳುತ್ತಿರಲಿಲ್ಲ.

ರಾಜ್ಯಕ್ಕೆ ಟಾಪರ್ ಬರಬೇಕು ಎಂದೇ ನಮ್ಮ ಕಾಲೇಜಿನಲ್ಲಿ ತಯಾರು ಮಾಡುತ್ತಿದ್ದರು. ಅದರ ಜೊತೆ ಸಂವಹನ ಕೌಶಲ್ಯ, ವ್ಯಕ್ತಿತ್ವ ವಿಕಸನಕ್ಕೂ ಮಹತ್ವ ನೀಡುತ್ತಿದ್ದರು. ಕಾಲೇಜಿನಲ್ಲಿ ಕಲಿಕೆಯಲ್ಲಿ ಟಾಪ್ ಇರುವವರಿಗೆ ಇನ್ನೂ ಮುತುವರ್ಜಿ ವಹಿಸುತ್ತಿದ್ದರು. ಟಾಪರ್ ಆಗುತ್ತೇನೆ ಎನ್ನುವ ನಿರೀಕ್ಷೆ ನನಗಂತೂ ಇತ್ತು. ಇಂಗ್ಲಿಷ್‌ನಲ್ಲಿ 2, ಸಂಖ್ಯಾಶಾಸ್ತ್ರದಲ್ಲಿ 1 ಅಂಕ ಹೋಗಿದೆ. ಕಾಲೇಜಿನಲ್ಲಿ ನಡೆಸುತ್ತಿದ್ದ ಪೂರ್ವ ಪರೀಕ್ಷೆ ಈ ಯಶಸ್ಸಿಗೆ ಸಹಕಾರಿ ಆಗಿದೆ.

ನಿರಂತರ ಓದು ಬೇಸರ ಅನ್ನಿಸಿದಾಗ ಪೇಂಟಿಂಗ್ ಮಾಡ್ತಿದ್ದೆ. ಗೆಳತಿಯರ ಜೊತೆ ಲೂಡೊ ಆಡ್ತಿದ್ದೆ. ಸ್ವಲ್ಪ ಸಮಯ ಹರಟೆ ಹೊಡೆಯುತ್ತಿದ್ದೆ.

ಮುಂದೆ ಚಾರ್ಟರ್ಡ್ ಅಕೌಂಟೆಂಟ್ ಆಗಬೇಕು ಎನ್ನುವ ಆಸೆ ಇದೆ.

ಅಪ್ಪ ಮಂಜುನಾಥ ಡಿ.ಎಲ್. ಕೃಷಿಕರು, ಅಮ್ಮ ಮಂಜುಳಾ, ಗೃಹಿಣಿ.